SRI K. C. MODGEKAR DESAI—Before sanctioning the honorarium whether the Government is publishing in the local newspapers ? Most of the freedom fighters who fought in the second world war are not getting honorarium.

ಶ್ರೀ ವೀರಪ್ಪ ಮೊಯಿಲಿ.—ಇಂಥ ಜಾಹಿರಾತು ಕೊಡತಕ್ಕ ಕಾರ್ಯಕ್ರಮವನ್ನು ನಾವು ಸರ್ಕಾರದಲ್ಲಿ ಇಟ್ಟುಕೊಂಡಿಲ್ಲ.

MR. SPEAKER —If you can identify those who are living, please pass on the list to the Government. They will take action. ಮಾನ್ಯ ಸದಸ್ಯರವರೆ, ನಿಮ್ಮ ಪ್ರಶ್ನೆಯನ್ನು ತಡೆಹಿಯಲಾಗಿದೆ. ಅದೇ ರೀತಿ ಮನೋಹರ ಐನಾಪುರವರೆ ಪ್ರಶ್ನೆಗೂ ಟೈಂ ಬೇಕೆಂದು ಕೇಳಿದ್ದಾರೆ. ನಿಮ್ಮ ಪ್ರಶ್ನೆಯನ್ನು ಮುಂದಿನವಾರ ತೆಗೆದುಕೊಳ್ಳಿ ಣ ಬೈರೇಗೌಡರೇ ನಿಮ್ಮ ಪ್ರಶ್ನೆಗೂ ಕಾಲಾವಕಾಶಬೇಕೆಂದು ಕೇಳಿದ್ದಾರೆ, ಮುಂದಿನ ವಾರ ತೆಗೆದು ಳ್ಳೋಣ.

ಶ್ರೀ ಸಿ. ಬೈರೇಗೌಡ.—ನನಗೆ ಉತ್ತರಗಳು ಬಂದಿದೆ.

ಅಧ್ಯಕ್ಷರು.—ಮಾನ್ಯ ರವಿನ್ಯೂ ಮಂತ್ರಿಗಳು ಜೆಲ್ಲಿಗೆ ಹೋಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರ ಪರವಾಗಿ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಹಾಗಿದ್ದರೆ ಆಗಬಹುದು.

## ಕಂದಾಯ ಭೂಮಿಯ ಅತಿಕ್ರಮಣ

೬೦೭. ಆರ್.ಎನ್. ನಾಯ್ಕ್ (ಭಟ್ಕಳ).—ಮಾನ್ಯ ಕಾನೂನು, ಸಂಸದೀಯ, ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಂದಾಯ ಭೂಮಿ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡ ಎಷ್ಟು ಪ್ರಕರಣಗಳನ್ನು ಈ ತನಕ ಇಲಾಖೆ ದಾಖಲಿಸಿಕೊಂಡಿದೆ ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಥ ಎಷ್ಟು ಪ್ರಕರಣಗಳಿವೆ ?

ಇ) ಭಟ್ಕಳ ತಾಲ್ಲೂಕಿನಲ್ಲಿ ಇರುವ ಪ್ರಕರಣಗಳೆಷ್ಟು ?

ಈ) ಭಟ್ಕಳ ತಹಶೀಲ್ದಾರ್ ಅತಿಕ್ರಮಣ ಮಂಜೂರಿ ಪೂರ್ವದಲ್ಲಿಯೇ ಮಂಜೂರಿ ಭರವಸೆ ನೀಡಿ ಎಷ್ಟು ಪ್ರಕರಣಗಳಲ್ಲಿ ಅತಿಕ್ರಮಣದಾರರಿಂದ ಹಣ ತುಂಬಿಸಿಕೊಂಡಿದ್ದಾರೆ ?

ಶ್ರೀ ಎಂ ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು).—

ಅ) ೧೪೨೨ ಪ್ರಕರಣಗಳು ಉತ್ತರ ಕನ್ನಡ, ದಕ್ಷಿಣ ಕನ್ನಡ ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿರುತ್ತವೆ. ಉಳಿದ ಜಿಲ್ಲೆಗಳ ಮಾಹಿತಿ ಸಧ್ಯ ತಯಾರಿರುವುದಿಲ್ಲ.

ಆ) ೧೨೯೪.

ಇ) ಭಟ್ಕಳ–೨೧೦, ಹೊನ್ನಾವರ–೧೧೪

ಈ) ಮೂರು.

ಶ್ರೀ ಆರ್.ಎನ್ ನಾಯ್ಕ್.—ಅಧ್ಯಕ್ಷರೆ, ೧೪೨೨ ಪ್ರಕರಣಗಳಲ್ಲಿ ಅತಿಕ್ರಮಣ ಮಾಡಿ ಮನೆಗಳನ್ನು ಕಟ್ಟಿದ್ದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇವುಗಳನ್ನು ಎಷ್ಟು ವೇಳೆ ತೆಗೆದುಕೊಂಡು ಮಂಜೂರು ಮಾಡಲಾಗುತ್ತದೆ. ಅತಿಕ್ರಮಣ ಮಾಡಿದವರಿಗೆ ಮನೆ ನಿವೇಶನಕ್ಕಾಗಿ ಎಷ್ಟು ಕ್ಷೇತ್ರವನ್ನು ಅವರಿಗೆ ಮಂಜೂರು ಮಾಡಲಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ನನ್ನ (ಈ) ಪ್ರಶ್ನೆಯಲ್ಲಿ ಭಟ್ಕಳ ತಹಶೀಲ್ದಾರ್ ಅತಿಕ್ರಮಣ ಮಂಜೂರಿ ಪೂರ್ವದಲ್ಲಿಯೇ ಮಂಜೂರಿ ಭರವಸೆ ನೀಡಿ ಎಷ್ಟು ಪ್ರಕರಣಗಳಲ್ಲಿ ಅತಿಕ್ರಮಣದಾರರಿಂದ ಹಣ ತುಂಬಿಸಿಕೊಂಡಿದ್ದಾರೆ ಎಂದು ಕೇಳಿದ್ದಕ್ಕೆ ಮೂರು ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದೂ ಇನ್ನೂ ಹೆಚ್ಚಿದೆ. ಇದು ಮೂರೇ ಇದ್ದರೂ ಸಹ ಈ ರೀತಿಯಾಗಿ ಅತಿಕ್ರಮಣದಾರರಿಗೆ ಮಂಜೂರು ಮಾಡುತ್ತೇವೆಂದು

ಭರವಸೆ ಕೊಟ್ಟು ಹಣವನ್ನು ತುಂಬಿಸಿಕೊಳ್ಳಲಿಕ್ಕೆ ಅವರಿಗೆ ಅಧಿಕಾರ ಇದೆಯೇ ? ಮತ್ತು ಗಂಟೆಗೆ ಎಷ್ಟು ಪ್ರಮಾಣದಲ್ಲಿ ಹಣವನ್ನು ತುಂಬಿಸಿಕೊಳ್ಳಬೇಕು. ಎಂಬುದನ್ನು ತಹಶೀಲ್ದಾರ್‌ರವರು ನಿರ್ಧಾರ ಮಾಡಬೇಕೋ ಜಿಲ್ಲಾಧಿಕಾರಿಯವರು ನಿರ್ಧಾರ ಮಾಡಬೇಕೋ ಅಥವಾ ಯಾರು ನಿರ್ಧಾರ ಮಾಡಬೇಕು ದಯಮಾಡಿ ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಭಟ್ಕಳ್ ತಹಶೀಲ್ದಾರ್‌ರವರಿಗೆ ಈ ಭೂಮಿಯ ಮೌಲ್ಯವನ್ನು ವಸೂಲು ಮಾಡತಕ್ಕ ಅಧಿಕಾರ ಈ ಕಾನೂನಿನ ಪರಿಮಿತಿಯಲ್ಲಿ ಇಲ್ಲ. ಅವರಿಗೆ ಅಧಿಕಾರ ಇಲ್ಲದೆ ಈ ಹಣವನ್ನು, ಮೌಲ್ಯವನ್ನು ವಸೂಲು ಮಾಡಿ ಗೌರ್ನಮೆಂಟ್ ಟ್ರಜರಿಗೆ ತುಂಬಿದ್ದಾರೆ. ಅವರು ದುರುಪಯೋಗ ಮಾಡಿದ್ದಾರೆಂಬ ಆಪಾದನೆಗಳು ಇಲ್ಲ. ಅವರಿಗೆ ಅಧಿಕಾರ ಇಲ್ಲದೆ, ಆ ಮೌಲ್ಯವನ್ನು ಟ್ರಜರಿಗೆ ತುಂಬಿದ್ದರಿಂದ, ಅವರ ಮೇಲೆ ಇಲಾಖೆಯ ವತಿಯಿಂದ ವಿಚಾರಣೆ ಮಾಡುತ್ತಿದ್ದೇವೆ. ಇನ್ನು ಮಾನ್ಯ ಸದಸ್ಯರು ಅನಧಿಕೃತವಾಗಿ ಈ ಮನೆಗಳನ್ನು ಕಟ್ಟಿ ವಾಸ ಮಾಡತಕ್ಕವರಿಗೆ ಎಷ್ಟು ವಿಸ್ತೀರ್ಣದ ಭೂಮಿ ಕೊಡುತ್ತೀರಿ ಎಂದು ಕೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಈಗಾಗಲೇ, ಲ್ಯಾಂಡ್ ರೆವಿನ್ಯೂ ಆಕ್ಟ್ ೪೫ನ್ನು ತಿದ್ದುಪಡಿ ಮಾಡಿ ರೆಗ್ಯುಲರೈಸ್ ಮಾಡತಕ್ಕ ಕಾರ್ಯಕ್ರಮವನ್ನು ಮಾಡಬೇಕೆಂದು, ಸರ್ಕಾರದ ಮುಂದೆ ಈ ಕಾನೂನಿನ ತಿದ್ದುಪಡಿ ಪ್ರಸ್ತಾವನೆ ಇದೆ ಎಷ್ಟು ಮಾಡಬಹುದು, ಎಷ್ಟು ಮೌಲ್ಯಕ್ಕೆ ಹಾಕಬಹುದು, ಯಾವರೀತಿ ಮಾಡಬಹುದು, ಯಾರಿಗೆ ಮಾಡಬಹುದು ಇದನ್ನೆಲ್ಲಾ ನಾವು ಆ ಒಂದು ಕಾನೂನಿನಲ್ಲಿ ನಮೂದಿಸುತ್ತೇವೆ.

ಶ್ರೀ ಆರ್. ಎನ್. ನಾಯ್ಕ್.—ಭಟ್ಕಳ್ ತಹಶೀಲ್ದಾರ್‌ರವರು ಹಣದ ದುರುಪಯೋಗ ಮಾಡಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರೂ ಸಹ ಮಂಜೂರಾತಿ ಮಾಡಿಸುತ್ತೇವೆ ಎನ್ನುವ ಕಾರಣ ಕೊಟ್ಟು, ಭೂಮಿ ಅತಿಕ್ರಮಣ ಮಾಡಲಿಕ್ಕೆ ಭಟ್ಕಳ್‌ನಲ್ಲಿರುವಂಥ ಶ್ರೀಮಂತರನ್ನು ಕರೆದೂ ಅತಿಕ್ರಮಣ ಮಾಡಿಸಿ ಅವರಿಂದ ಹಣವನ್ನು ಸರ್ಕಾರದ ಟ್ರಜರಿಗೆ ತುಂಬಿಸಿದ್ದಾರೆ. ಈ ರೀತಿಯಾಗಿ ಹಲವಾರು ಪ್ರಕರಣಗಳು ನಡೆದಿವೆ. ಬಡವರಿಗೆ ಜಮೀನು ಕೊಡಬೇಕು, ಮಾನಸಿಪಾಲಿಟಿ ವತಿಯಿಂದ ಬಡವರಿಗೆ ಸೈಟುಗಳನ್ನು ಕೊಡಬೇಕು ಎನ್ನುವ ಸರ್ಕಾರದ ತೀರ್ಮಾನಕ್ಕೆ ಅಲ್ಲಿ ಅವರು ಕೊಡಲಿ ಪೆಟ್ಟು ಹಾಕಿದ್ದಾರೆ. ಇದನ್ನು ನಾನು ಆಗಿನ ಡಿ.ಸಿ.ಯವರಿಗೆ ಹೇಳಿದ್ದೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಸಹ ಪತ್ರ ಬರೆದಿದ್ದೆ. ಇದು ಒಳಗಿಂದೊಳಗೆ ನಡೆಯುತ್ತಿದೆ ಎನ್ನುವುದನ್ನು ತಿಳಿಸಿದ್ದೆ. ಆದರೂ ಸಹ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಈಗ ಇವರು ಮಾಡಿರತಕ್ಕದ್ದು ಕಾನೂನು ಬಾಹಿರ ವಾಗಿರುವುದು ಕಂಡುಬಂದಿದೆ. ಆದುದರಿಂದ, ಈ ಅಧಿಕಾರಿ ಮೇಲೆ ಏನು ಕ್ರಮ ತೆಗೆದು ಕೊಳ್ಳುತ್ತೀರಾ ? ಮತ್ತೆ ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಈ ಬಗ್ಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅವರು ಕಾನೂನು ಬಾಹಿರವಾಗಿ ಹಣವಸೂಲಿ ಮಾಡಿ ಸರ್ಕಾರದ ಟ್ರಜರಿಗೆ ತುಂಬಿದ್ದಾರೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಆದ್ದರಿಂದ, ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ವಿಚಾರಣೆ ಮಾಡದೆ ನಾವು ಇಂತಹದೇ ಶಿಕ್ಷೆ ಕೊಡುತ್ತೇವೆಂದು ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಆರ್.ಎನ್. ನಾಯಕ್.—ಈಗ ಸರ್ಕಾರ ಒಪ್ಪಿಕೊಂಡಿರುವುದರಿಂದ, ತಮಗೆ ಅಧಿಕಾರ ಇದೆ, ಅವರನ್ನು ಸಸ್ಪೆಂಡ್ ಮಾಡಿ. ಅವರು ಕಾನೂನುಬಾಹಿರ ಕೆಲಸ ಮಾಡಿದ್ದಾರೆ ಎಂದು ಕ್ರಮ ತೆಗೆದುಕೊಂಡು ಸಸ್ಪೆನ್‌ಷನ್ ಮಾಡಿ ಸಸ್ಪೆಂಡ್ ಮಾಡಿದ ಮೇಲೆ ವಿಚಾರಣೆ ಮಾಡಿ. ತಪ್ಪು ಮಾಡದಿದ್ದರೆ ಅವರಿಗೆ ಸರ್ಟಿಫಿಕೇಟ್ ಕೊಡುವುದು ಇದ್ದರೆ ಸರ್ಟಿಫಿಕೇಟ್ ಕೊಡಿ. ಹಿಂದೆ ಆತ ಕಾನೂನುಬಾಹಿರವಾದಂಥ ಕೆಲಸ ಮಾಡಿ ಸಸ್ಪೆಂಡ್ ಆದ ಅಧಿಕಾರಿ. ಈಗ ಆತನಿಗೆ ಭಟ್ಕಳ್‌ಗೆ ಟ್ರಾನ್ಸ್‌ಫರ್ ಆಗಿದೆ. ಮತ್ತೆ ಆತ ಅಲ್ಲಿಯೇ ಗಟ್ಟಿಯಾಗಿ ಕುಳಿತಿದ್ದಾನೆ. ದಯಮಾಡಿ ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕೂಡಲೇ ಸಸ್ಪೆಂಡ್‌ನಲ್ಲಿಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ ಇವರು ಹೆಚ್ಚು ಸಮಯ ತೆಗೆದುಕೊಂಡರೆ ಬೇರೆ ಯಾವರು ಕ್ವೊಶ್ಚನ್ ಕೇಳಲಿಕ್ಕೆ ತೊಂದರೆಯಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ತಾವು ತಮ್ಮ ಪ್ರಶ್ನೆ ಬಗ್ಗೆ ವಿವರಣೆ ಕೇಳುವಾಗ ಬೇರೆಯವರಿಗೆ ತೊಂದರೆ ಆಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಅಮಾನತ್ತು ಮಾಡತಕ್ಕದ್ದು ಕೆಲಸದಿಂದ ತೆಗೆಯತಕ್ಕದ್ದು. ಹೀಗೆ ಯಾವುದೇ ಕೆಲಸ ಮಾಡತಕ್ಕದ್ದಕ್ಕೂ ಒಂದೊಂದು ಹೆಜ್ಜೆ ಇದೆ. ಈಗ ತಹಶೀಲ್ದಾರ್

ರವರಿಗೆ ಅವಮಾನತ್ತು ಮಾಡಬೇಕಾದರೆ ತನಿಖೆಯಲ್ಲಿ ಪ್ರೈಮಾಫೇಸಿ ಆಗಿ ತಪ್ಪು ಮಾಡಿದ್ದಾರೆಂದು ತೀರ್ಮಾನ ಆಗಬೇಕಾಗುತ್ತದೆ. ಆ ರೀತಿಯಲ್ಲಿ ಏನಾದರೂ ಅಮಾನತ್ತು ಮಾಡತಕ್ಕ ವಿಚಾರ ಇದ್ದರೆ ಅಮಾನತ್ತು ಮಾಡಲಿಕ್ಕೆ ಸರ್ಕಾರ ಹಿಂದೆಮುಂದೆ ನೋಡುವುದಿಲ್ಲ. ಆದ್ದರಿಂದ, ತಾವು ಏನು ಹೇಳಿದ್ದೀರಿ, ಅದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಪ್ರೈಮಾಫೇಸಿಯಲ್ಲಿ ಅಪರಾಧಿ ಎಂದು ಕಂಡುಬಂದರೆ ಅಮಾನತ್ತಿನಲ್ಲಿ ಇಡಬೇಕಾಗುತ್ತದೆ. ಅಮಾನತ್ತಿನಲ್ಲಿ ಇಡತಕ್ಕದ್ದು ಶಿಕ್ಷೆ ಅಲ್ಲ ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಡಿಸ್‌ಮಿಸ್ ಮಾಡಿದರೆ ಅದು ಶಿಕ್ಷೆ.

ಶ್ರೀ ಆರ್. ಎನ್ ನಾಯ್ಕ್.—ತಾವು ತನಿಖೆಯನ್ನು ಮಾಡದೇ ತಪ್ಪು ಮಾಡಿದ್ದಾನೆಂದು ಒಪ್ಪಿ ಕೊಂಡಿದ್ದೀರಿ ಇದರ ಬಗ್ಗೆ ತನಿಖೆಯಾಗಿದೆ ತಾವು ಯಾವರೀತಿ ಒಪ್ಪಿಕೊಂಡಿರಿ. ಈಗಾಗಲೇ ತನಿಖೆ ಆಗಿದೆ. ತನಿಖೆಯಾದ ಮೇಲೆ ಅಮಾನತ್ತು ಮಾಡಿ. ತಮಗೆ ಅಧಿಕಾರ ಇದೆ. ಹಿಂದೊಮ್ಮೆ ಅತನು ಸಸ್ಪೆಂಡ್ ಆಗಿದ್ದಾನೆ. ಈಗ ಮತ್ತೊಂದು ಸಲ ಮಾಡಿ. ಆತನಿಗೆ ವರ್ಗವಾಗಿದೆ. ಆದರೂ ಕೂಡ ಅಲ್ಲಿಂದ ರಿಲೀವ್ ಮಾಡಿಲ್ಲ, ಆತನನ್ನು ರಿಲೀವ್ ಮಾಡಿಸಿ ಇಲ್ಲದಿದ್ದರೆ ಆತನು ಅದನ್ನು ಮುಚ್ಚಿ ಹಾಕಿಸುತ್ತಾನೆ.

ಅಧ್ಯಕ್ಷರು.—ಬೇರೆ ರೀತಿಯಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಆದರಲ್ಲಿ ಯಾವುದಾದರೂ ಒಂದು ಸಲಹೆಯನ್ನು ಜಾರಿಗೆ ತರಲು ಅವರು ಪ್ರಯತ್ನ ಮಾಡಲಿ.

ಶ್ರೀ ಆರ್ ಎನ್. ನಾಯಕ್.—ಈ ದಿನವೇ ಅವರನ್ನು ರಿಲೀವ್ ಮಾಡುತ್ತೇವೆಂದು ಸಚಿವರು ಹೇಳಲಿ, ಆದನ್ನಾದರೂ ಹೇಳಲಿ. ವರ್ಗವಾಗಿ ೧೫ ದಿವಸವಾದರೂ ಏತಕ್ಕೆ ರಿಲೀವ್ ಮಾಡಿಲ್ಲ ?

ಶ್ರೀ ಡಿ. ಬಿ. ಚಂದ್ರೇಗೌಡ.—೧೪೧೭ ಪ್ರಕರಣಗಳು ಎಂದು ಇದರಲ್ಲಿದೆ. ಒಂದೊಂದು ಜಿಲ್ಲೆಯೊಳಗೆ ಎಷ್ಟು ಇದೆ ಎಂಬುದನ್ನು ಇಲ್ಲಿ ಹೇಳಿದ್ದಾರೆ. ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯದ್ದು ಇದೆ. ತಾವು ಅಲ್ಲಿಗೆ ಪ್ರವಾಸ ಹೋದರೆ ತಮಗೇ ಗೊತ್ತಾಗುತ್ತದೆ. ಒಂದೊಂದು ಕಟ್ಟಡದ ಬೆಲೆ ಸುಮಾರು ೫೦ ಲಕ್ಷ ರೂಪಾಯಿಯಾಗುತ್ತದೆ. ಇದನ್ನು ಲಘುವಾಗಿ ತೆಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಂತಹ ಪ್ರಕರಣಗಳನ್ನು ನಾವು ಮೊದಲು ತಡೆಗಟ್ಟಬೇಕಾಗುತ್ತದೆ. ಇಲ್ಲದಿದ್ದರೆ ಇದನ್ನು ತಡೆಗಟ್ಟಲು ಕರ್ನಾಟಕದಲ್ಲಿ ಶಾಸನವೇ ಇಲ್ಲವೇ ಎಂಬುದಂತಹ ಅರ್ಥ ಬರುತ್ತದೆ. ಆದ್ದರಿಂದ ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಅನೇಕ ಸಲಹೆ ಸೂಚನೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅವರು ಕಾರ್ಯಾರಂಭ ಬಾಹಿರವಾಗಿ ಅನುಮತಿ ಕೊಟ್ಟಿದ್ದು ಪ್ರೈಮಾಫೇಸಿ ಕೇಸ್ ರೀತಿಯಾಗಿ ಕಾಣುತ್ತದೆ. ಆದ್ದರಿಂದ ಅವರನ್ನು ಆ ಅಧಿಕಾರ ಸ್ಥಾನದಿಂದ ರಿಲೀವ್ ಮಾಡಲಿಕ್ಕೆ ಕೂಡಲೇ ಆದೇಶ ಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—೧೪ ಸಾವಿರ ಪ್ರಕರಣಗಳು ಎಂದು ಇದೆ. ಇದನ್ನು ತಡೆಗಟ್ಟುವಂತಹ ಶಾಸನ ಕರ್ನಾಟಕದಲ್ಲಿ ಇಲ್ಲವೇ ? ಶಾಸನವೇ ಸತ್ತು ಹೋಗಿದೆಯೇ ಹೇಗೆ ? ೧೪,೧೭೨ ಕೇಸ್‌ಗಳು ಉತ್ತರ ಕನ್ನಡ ಜಿಲ್ಲೆ ಒಂದರಲ್ಲೇ.....

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ವಿರೋಧ ಪಕ್ಷದ ನಾಯಕರು ಇದರ ವ್ಯಾಪಕತೆಯನ್ನು ಬಹುಶಃ ಸಂಪೂರ್ಣವಾಗಿ ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಬರೀ ಈ ಜಿಲ್ಲೆಗಳದ್ದು ಮಾತ್ರವಲ್ಲ, ಬೇರೆ ಬೇರೆ ಜಿಲ್ಲೆಗಳದ್ದೂ ಕೂಡ ಇದೆ. ಇದನ್ನು ತೆಗೆಯಲಿಕ್ಕಾಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—೧೪,೧೭೨ ಪ್ರಕರಣಗಳಲ್ಲಿ ಉತ್ತರ ಕನ್ನಡ ಜಿಲ್ಲೆ, ಬೆಳಗಾವಿ, ಧಾರವಾಡ ಎಲ್ಲವೂ ಸೇರಿದೆ. ಆದರೂ ಕೂಡ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಇದೆ.

SRI M. VEERAPPA MOILY.–I am sorry, this has been misconstrued There are old encroachments and new encroachments. ಕೆಲವು ಕಡೆಗಳಲ್ಲಿ ಬಡವರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಬಗರ್‌ಹುಕುಂ ಸಾಗುವಳಿ ಮಾಡುವಂಥಾದ್ದು ಬಿಡು ಮತ್ತೊಂದು ಬಡವರು ಅನುಮತಿ ಇಲ್ಲದೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇಂತಹ ಕಡೆಗಳಲ್ಲಿ ಒಮ್ಮಿದೊಮ್ಮೆಗೇ ಅವರನ್ನು ಎತ್ತಂಗಡಿ ಮಾಡುತ್ತೇವೆಂದು ಹೇಳಿದರೆ ಸರಿಯಾಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಬಡವರ ಬಗ್ಗೆ ಹೇಳಲಿಲ್ಲ. ಅಲ್ಲಿ ೫೦ ಲಕ್ಷ ರೂಪಾಯಿ ಬೆಲೆ ಬಾಳುವಂತಹ ಕಟ್ಟಡಗಳು ಒಂದೊಂದು ಎಕರೆಯಲ್ಲಿ ಒಂದಿವೆ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಕನ್ನಡ ಜಿಲ್ಲೆಯಲ್ಲಿ ೧೭೯ ಪ್ರಕರಣಗಳು ಇವೆ. ಇವೆಲ್ಲಾ ಲಕ್ಷಾಧೀಶ್ವರರು ಕಟ್ಟಿದಂತಹ ಮನೆಗಳು ಅಲ್ಲ. ಅದರಲ್ಲಿ ಅರ್ಹತೆಯನ್ನು ಪಡೆಯದೇ ಇರುವವರು ಯಾರಾದರೂ ಅಲ್ಲಿ ಮನೆ ಕಟ್ಟಿಕೊಂಡಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳಬಹುದು. ಅಂತಹ ನಿರ್ದಿಷ್ಟ ಪ್ರಕರಣಗಳು ಯಾವುದು ಎಂಬುದನ್ನು ಹುಡುಕಿ ಎಂದು ಹೇಳುತ್ತೇನೆ. ಆದರೆ ಸಾರಾಸಗಟಾಗಿ ಎಲ್ಲರೂ ಮಾಡುವಂತಹ ಏನ್‌ಕ್ರೋಚ್‌ಮೆಂಟ್ ಅನ್ನು ರೆಗ್ಯುಲರೈಸ್ ಮಾಡುವಂತಹ ಸ್ಕೀಮ್ ಸರಕಾರದಲ್ಲಿ ಇಲ್ಲ. ಯಾರಿಗೆ ಅರ್ಹತೆ ಇದೆ ಅವರು ಅದನ್ನು ಸಕ್ರಮ ಮಾಡತಕ್ಕಂತಹ ಕಾರ್ಯಕ್ರಮ ಸರಕಾರದ ಮುಂದೆ ಇದೆ. ಇದಕ್ಕೂ ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ.

## ಗ್ರಾಮಾಧಿಕಾರಿಗಳ ಹುದ್ದೆಯನ್ನು ರದ್ದು ಪಡಿಸುವುದು

೨೦೮. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಟೇಲ್, ಶ್ಯಾನುಭೋಗ, ತೋಟಿ ತಳವಾರ, ನೀರುಗಂಟಿ ಮುಂತಾದ ಗ್ರಾಮಾಧಿಕಾರಿಗಳ ಹುದ್ದೆಯನ್ನು ಏಂದಿನಿಂದ ರದ್ದು ಪಡಿಸಲಾಗಿದೆ ?

ಆ) ಈ ಹುದ್ದೆಗಳನ್ನು ರದ್ದುಪಡಿಸುವಾಗ ಪರಿಹಾರವನ್ನು ಏನಾದರೂ ನೀಡಲಾಗಿದೆಯೇ, ಹಾಗಿದ್ದರೆ ಯಾವ ಯಾವ ಹುದ್ದೆಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ ?

ಇ) ಈ ಹುದ್ದೆಗಳಲ್ಲಿದ್ದವರಿಗೆ ಮಾಶಾಸನ ಏನಾದರೂ ಕೊಡಲಾಗುತ್ತದೆಯೇ ?

ಈ) ಹಾಗಿದ್ದಲ್ಲಿ ಯಾವ ಯಾವ ಹುದ್ದೆಗೆ ಎಷ್ಟೆಷ್ಟು ಮಾಶಾಸನ ಕೊಡಲಾಗುತ್ತದೆ ?

ಉ) ಕೋಲಾರ ತಾಲ್ಲೂಕಿನಲ್ಲಿ ಅನೇಕ ಗುಮಾಸ್ತ ಪಟೇಲರಿಗೆ ಮತ್ತು ಗುಮಾಸ್ತ ಶ್ಯಾನುಭೋಗರಿಗೆ ಮಾಶಾಸನ ಕೊಡುತ್ತಿರುವುದು ನಿಜವೇ ?

ಊ) ಚಿಂತಾಮಣಿ ತಾಲ್ಲೂಕಿನಲ್ಲಿ ಮಾಶಾಸನವನ್ನು ಗುಮಾಸ್ತ ಪಟೇಲರಿಗೆ ಕೊಡದೇ ಇರುವುದು ನಿಜವೇ ? ಹಾಗಿದ್ದಲ್ಲಿ ಇದಕ್ಕೆ ಕಾರಣವೇನು ?

ಋ) ಎಲ್ಲಾ ಗುಮಾಸ್ತ ಪಟೇಲರಿಗೂ ಮಾಶಾಸನವನ್ನು ಕೊಡಲಾಗುವುದೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—

ಅ) ೧–೨–೬೩ ರಿಂದ ರದ್ದುಪಡಿಸಲಾಗಿದೆ.

ಆ) ವಂಶಪಾರಂಪರ್ಯ ಹಕ್ಕುಗಳನ್ನು ಕಳೆದುಕೊಂಡವರಿಗೆ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾಶಿ ಕಾಯಿದೆ ೧೯೬೧ರ ಕಲಂ ಅಧೀನದಲ್ಲಿ ಪರಿಹಾರವನ್ನು ನಿಡಲಾಗಿದೆ. ಈ ಪರಿಹಾರ ಧನವು ಜವೀನು ಹೊಂದಿದವರಿಗೆ ನೀಡಲಾಗುವ ಪೋಟಿಗೆಯ ಮೂರು ಪಟ್ಟು ಮತ್ತು ಜವೀನು ಇಲ್ಲದವರಿಗೆ ನೀಡಲಾಗುವ ಪೋಟಿಗೆಯ ೬ ಪಟ್ಟು ಇರುತ್ತದೆ.

ಇ) ಹೌದು.

ಈ) ವಂಶಪಾರಂಪರ್ಯ ಹಕ್ಕುಗಳನ್ನು ಕಳೆದುಕೊಂಡ ಶ್ಯಾನುಭೋಗರುಗಳಿಗೆ (ಶ್ಯಾನುಭೋಗರು, ಕರ್ಣಂಗಳು ಮತ್ತು ಪಟ್ವಾರಿಗಳು) ಮತ್ತು ಪಟೇಲರಿಗೆ ಮಾಹೆಯಾನ ೧೦೦-೦೦ ರೂ.ಗಳ ಹಾಗೂ ಕೆಳದರ್ಜೆ ಗ್ರಾಮಾಧಿಕಾರಿಗಳಿಗೆ ೭೫-೦೦ ರೂ. ಗಳ ಅನುಕಂಪ ಭತ್ಯೆಯನ್ನು ಹಲವು ಷರತ್ತುಗಳಿಗೊಳಪಟ್ಟು ನೀಡಲಾಗುತ್ತಿದೆ.

ಉ) ಕೋಲಾರ ತಾಲ್ಲೂಕಿನಲ್ಲಿ ಗುಮಾಸ್ತ ಪಟೇಲರಿಗೆ ಮತ್ತು ಗುಮಾಸ್ತ ಶ್ಯಾನುಭೋಗರಿಗೆ ಮಾಶಾಸನ ಕೊಟ್ಟಿರುವುದಿಲ್ಲ.

ಊ) ಸರ್ಕಾರಿ ಆದೇಶದ ಅನ್ವಯಕ್ಕೆ ಇವರು ಒಳಪಡದೇ ಇರುವುದರಿಂದ. ಚಿಂತಾಮಣಿ ತಾಲ್ಲೂಕಿನ ಗುಮಾಸ್ತ ಪಟೇಲರಿಗೆ ಮಾಶಾಸನ ಕೊಡಲು ಬರುವುದಿಲ್ಲ

ಋ) ಯಾವ ಗುಮಾಸ್ತ ಪಟೇಲರಿಗೂ ಮಾಶಾಸನವನ್ನು ಕೊಡುವುದು ಸಾಧ್ಯವಿಲ್ಲ.